ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 2202

ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 18.03.2022

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ತೋಟಗಾರಿಕಾ ಇಲಾಖೆಯಿಂದ ರೈತರಿಗೆ ಯಾವ ಯಾವ ಬೆಳೆಗಳಿಗೆ ಪ್ರೋತ್ಸಾಹಧನ (subsidy) ನೀಡಲಾಗುತ್ತಿದೆ;	ತೋಟಗಾರಿಕಾ ಇಲಾಖೆಯಿಂದ ರೈತರಿಗೆ ಈ ಕೆಳಕಂಡ ಬೆಳೆಗಳಿಗೆ ಪ್ರೋತ್ಸಾಹಧನ (subsidy) ನೀಡಲಾಗುತ್ತಿದೆ; • **ಹಣ್ಣಿನ ಬೆಳೆಗಳು** : ಮಾವು, ಪೇರಲ, ಪಪ್ಪಾಯ, ಬಾಳೆ, ನಿಂಬೆ, ಸಪೋಟ, ಅನಾನಸ್, ನೇರಳೆ, ಡ್ರಾಗನ್ ಫ್ರೂಟ್, ಅಂಜೂರ, ಇತ್ಯಾದಿ • **ತರಕಾರಿ ಬೆಳೆಗಳು:** ಟೋಮ್ಯಾಟೋ, ಆಲೂಗಡ್ಡೆ, ಬದನೆ, ಮೆಣಸಿನಕಾಯಿ, ನುಗ್ಗೆ, ಕುಂಬಳ ಜಾತಿಯ ತರಕಾರಿಗಳು ಇತ್ಯಾದಿ • **ತೋಟದ ಬೆಳೆಗಳು** : ತೆಂಗು, ಗೋಡಂಬಿ, ತಾಳೆಬೆಳೆ, ವಿಳ್ಯೆದೆಲೆ, ಕೋಕೋ ಇತ್ಯಾದಿ • **ಸಾಂಬಾರು ಬೆಳೆಗಳು:** ಶುಂಠಿ, ಕಾಳುಮೆಣಸು, ಸರ್ವಸಾಂಬಾರು, ದಾಲ್ಚಿನಿ, ಅರಿಶಿಣ, ಏಲಕ್ಕಿ, ಲವಂಗ ಇತ್ಯಾದಿ • **ಔಷಧಿ ಬೆಳೆಗಳು** : ಅಶ್ವಗಂಧ, ಲೋಳೆಸರ ಇತ್ಯಾದಿ • **ಸುಗಂಧ ದ್ರವ್ಯ ಬೆಳೆಗಳು** : ಶ್ರೀಗಂಧ, ನಿಂಬೆಹುಲ್ಲು ಇತ್ಯಾದಿ • **ಅಣಬೆ**
ಆ)	ರೈತರಿಂದ ಈ ಪ್ರೋತ್ಸಾಹಧನಕ್ಕೆ ಬಂದಿರುವ ಅರ್ಜಿಗಳೆಷ್ಟು; ವಿಲೇಯಾಗಿರುವ ಮತ್ತು ವಿಲೇಯಾಗದಿರುವ ಅರ್ಜಿಗಳೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)	ರೈತರಿಂದ ಈ ಪ್ರೋತ್ಸಾಹಧನಕ್ಕೆ ಪ್ರಸ್ತುತ ಸಾಲಿನಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ:**2,15,002** ವಿಲೇಯಾಗಿರುವ ಅರ್ಜಿಗಳ ಸಂಖ್ಯೆ:**1,51,313** ವಿಲೇಯಾಗದಿರುವ ಅರ್ಜಿಗಳ ಸಂಖ್ಯೆ:**62,296** ಜಿಲ್ಲಾವಾರು, ತಾಲ್ಲೂಕುವಾರು ವಿವರವನ್ನು CDಯಲ್ಲಿ ಒದಗಿಸಿದೆ.
ಇ)	ಈ ಪ್ರೋತ್ಸಾಹಧನಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾಗಿರುವ ಹಾಗೂ ಉಳಿದಿರುವ ಮೊತ್ತವೆಷ್ಟು;	ಪ್ರೋತ್ಸಾಹಧನಕ್ಕೆ ಈವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ರೂ.37897.64ಲಕ್ಷಗಳು ಖರ್ಚಾದ ಅನುದಾನ ರೂ.25215.77ಲಕ್ಷಗಳು ಹಾಗೂ ಉಳಿದಿದ್ದು ವಿನಿಯೋಗಿಸಲಾಗುತ್ತಿರುವ ಅನುದಾನ ರೂ.12681.87ಲಕ್ಷಗಳು.

ಈ	ಪ್ರಸ್ತುತ ರೈತರಿಗೆ ಪ್ರೋತ್ಸಾಹಧನವನ್ನು ಸ್ಥಗಿತಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು?	ಪ್ರಸ್ತುತ ರೈತರಿಗೆ ಪ್ರೋತ್ಸಾಹಧನವನ್ನು ಸ್ಥಗಿತಗೊಳಿಸಲಾಗಿರುವುದಿಲ್ಲ.

HORTI / 193 / HGM / 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.